**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ.,**
**ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2629/2022**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು

1) ಅರ್ಬಾಜ ಮೊಹಮ್ಮದ ರಫೀಕ್ ಕಲಾಯಿಗಾರ
ವಯಾಃ 23 ವರ್ಷ, ಉಃ ವ್ಯವಹಾರ
ಸಾಃ ಐಸಿಐಸಿಐ ಬ್ಯಾಂಕ ಹತ್ತಿರ,
ಯಾಲಕ್ಕಿ ಶೆಟ್ಟರ ಕಾಲೊನಿ, ಧಾರವಾಡ.

2) ಗೌಸಮೋದಿನ ಮಹಮ್ಮದ ರಫೀಕ್ ಕಲಾಯಿಗಾರ
ವಯಾಃ 28 ವರ್ಷ, ಉಃ ವ್ಯವಹಾರ
ಸಾಃ ಐಸಿಐಸಿಐ ಬ್ಯಾಂಕ ಹತ್ತಿರ,
ಯಾಲಕ್ಕಿ ಶೆಟ್ಟರ ಕಾಲೊನಿ, ಧಾರವಾಡ.

3) ಫೈರೋಜ ಮೊಹಮ್ಮದ ರಫೀಕ್ ಕಲಾಯಿಗಾರ
ವಯಾಃ 25 ವರ್ಷ, ಉಃ ವ್ಯವಹಾರ
ಸಾಃ ಐಸಿಐಸಿಐ ಬ್ಯಾಂಕ ಹತ್ತಿರ,
ಯಾಲಕ್ಕಿ ಶೆಟ್ಟರ ಕಾಲೊನಿ, ಧಾರವಾಡ..

4) ನಜಬುನ್ನಿಸಾ ಮಹಮ್ಮದ ರಫೀಕ್ ಕಲಾಯಿಗಾರ
ವಯಾಃ 45 ವರ್ಷ, ಉಃ ಗೃಹಿಣಿ
ಸಾಃ ಐಸಿಐಸಿಐ ಬ್ಯಾಂಕ ಹತ್ತಿರ,
ಯಾಲಕ್ಕಿ ಶೆಟ್ಟರ ಕಾಲೊನಿ, ಧಾರವಾಡ.

ದೋಷಾರೋಪಣೆ

ಶ್ರೀ ಮಹೇಶ ಚಂದ್ರಕಾಂತ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ ಆದ ನಾನು ಈ ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಇಡುವ ದೋಷಾರೋಪಣೆಗಳೆಂದರೆಃ-

ಮೊದಲನೆಯದಾಗಿ, ದಿನಾಂಕಃ 06.04.2022 ರಂದು ಬೆಳಿಗ್ಗೆ 11.30 ಗಂಟೆಯ ಸುಮಾರಿಗೆ ಧಾರವಾಡ ವಿದ್ಯಾಗಿರಿ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಯಾಲಕ್ಕಿಶೆಟ್ಟರ ಕಾಲೊನಿ ಐಸಿಐಸಿಐ ಬ್ಯಾಂಕ ಹತ್ತಿರ ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ ಫಿರ್ಯಾದುದಾರರೊಂದಿಗೆ ಹಾಯ್ದಾಡುವ ಜಾಗೆಯ ಸಲುವಾಗಿ ತಂಟೆ ತೆಗೆದು ಅವರ ಮನೆಯ ಮೇಲೆ ಕಲ್ಲು ಎಸೆದು, ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಅಲ್ಲದೇ ಆರೋಪಿ ನಂ.5 ನೇ ದವರು ಚಾ.ಸಾ.05 ನೇದವರಿಗೆ ಹಾಗೂ ಫಿರ್ಯಾದಿಯ ಸಹೋದರಿಯರಾದ ಪಾರ್ವತಿಬಾಯಿ ಮತ್ತು ನಿರ್ಮಲಾಬಾಯಿ ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ ಅವಮಾನಪಡಿಸಿ, ಆ ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆಯ ಕಲಂ **504** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಎರಡನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ ಫಿರ್ಯಾದುದಾರರೊಂದಿಗೆ ಹಾಯ್ದಾಡುವ ಜಾಗೆಯ ಸಲುವಾಗಿ ತಂಟೆ ತೆಗೆದು, ಜಗಳ ಬಿಡಿಸಲು ಬಂದ ಚಾ.ಸಾ.06, 07 ಮತ್ತು 08 ನೇದವರಿಗೆ ನೀವು ಆರೋಪಿತರೆಲ್ಲರೂ ತಮ್ಮ ತಮ್ಮ ಕೈಗಳಿಂದ ಹೊಡೆದು ನೋವನ್ನುಂಟುಮಾಡಿ, ಆ ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆಯ ಕಲಂ **323** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತಿರಿ?

ಮೂರನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ ಫಿರ್ಯಾದುದಾರರೊಂದಿಗೆ ಹಾಯ್ದಾಡುವ ಜಾಗೆಯ ಸಲುವಾಗಿ ತಂಟೆ ತೆಗೆದು, ಆರೋಪಿ ನಂ.1 ನೇದವನು ಫಿರ್ಯಾದಿಯ ಮಗನಾದ ಚಾ.ಸಾ.04 ನೇದವನಿಗೆ ತನ್ನ ಹತ್ತಿರವಿದ್ದ ಹೆಲ್ಮೆಟದಿಂದ ತಲೆಗೆ ಹೊಡೆದು ಹಲ್ಲೆ ಮಾಡಿದ್ದು, ಅಲ್ಲದೇ ಅದೇ ಹೆಲ್ಮೆಟದಿಂದ ಆರೋಪಿ ನಂ.2 ನೇದವನು ಫಿರ್ಯಾದಿಗೆ ಹಲ್ಲೆ ಮಾಡಿದ್ದು, ನಂತರ ಜಗಳ ಬಿಡಿಸಲು ಬಂದ ಚಾ.ಸಾ.06, 07 ಮತ್ತು 08 ನೇದವರಿಗೆ ನೀವು ಆರೋಪಿತರೆಲ್ಲರೂ ಅಲ್ಲಿಯೇ ಬಿದ್ದಿದ್ದ ಕಲ್ಲುಗಳಿಂದ ಹಾಗೂ ಕಬ್ಬಿಣ ರಾಡದಿಂದ ಹೊಡೆದು ಗಾಯಪಡಿಸಿದ್ದು, ಆ ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆಯ ಕಲಂ **324** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತಿರಿ?

ಕೊನೆಯದಾಗಿ, ಈ ಮೇಲೆ ಹೇಳಿದ ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ ನೀವು ಆರೋಪಿತರು ಫಿರ್ಯಾದಿಗೆ ಹಾಗೂ ಚಾ.ಸಾ.4, 6 ರಿಂದ 8 ನೇದವರಿಗೆ "ಇನ್ನೊಮ್ಮೆ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲ" ಅಂತಾ ಜೀವ ಬೆದರಿಕೆ ಹಾಕಿ, ಆ ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆಯ ಕಲಂ **506** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಆದ್ದರಿಂದ ಈ ಮೇಲೆ ಹೇಳಿದ ದೋಷಾರೋಪಣೆಯ ಬಗ್ಗೆ ಆರೋಪಿತರಾದ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕಾಗಿ ನಿರ್ದೇಶಿಸುತ್ತೇನೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಾದ ಕನ್ನಡದಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನೀಡಿರುವ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು.)

ಧಾರವಾಡ
ದಿನಾಂಕಃ **11.05.2023**

**(ಮಹೇಶ ಚಂದ್ರಕಾಂತ)**
**3 ನೇ ಹೆ ಹಿ ದಿ ನ್ಯಾಯಿಕ ದಂಡಾಧಿಕಾರಿಗಳವರ**
**ನ್ಯಾಯಾಲಯ, ಧಾರವಾಡ.**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2629/2022**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 1. ಅರ್ಬಾಜ ಮೊಹಮ್ಮದ ರಫೀಕ್ ಕಲಾಯಿಗಾರ

:ಆಪಾದನೆ:

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ : ಹೌದು

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ : ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ 11.05.2023

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತರ ಸಹಿ

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2629/2022**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 2. ಗೌಸಮೋದಿನ ಮಹಮ್ಮದ ರಫೀಕ್ ಕಲಾಯಿಗಾರ

:ಆಪಾದನೆ:

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ : ಹೌದು

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ : ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ 11.05.2023

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತರ ಸಹಿ

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ.,**
**ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2629/2022**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 3. ಫೈರೋಜ ಮೊಹಮ್ಮದ ರಫೀಕ್ ಕಲಾಯಿಗಾರ

:ಆಪಾದನೆ:

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ : ಹೌದು

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ : ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ 11.05.2023

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತರ ಸಹಿ

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2629/2022**

ಫಿರ್ಯಾದಿ : ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರು 4. ನಜಬುನ್ನಿಸಾ ಮಹಮ್ಮದ ರಫೀಕ್ ಕಲಾಯಿಗಾರ

:ಆಪಾದನೆ:

ಪ್ರಶ್ನೆ : ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ : ಹೌದು

ಪ್ರಶ್ನೆ : ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುತ್ತೀರಾ?

ಉತ್ತರ : ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ 11.05.2023

3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ
ಸಿಜೆಎಂ., ಧಾರವಾಡ.

ಆರೋಪಿತರ ಸಹಿ